**PW-1** OS573/2014

**<u>2 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಕೆ.ಜಿ.ಎಫ್,</u>**

**<u>ಅಸಲು ದಾವೆ. ಸಂಖ್ಯೆ:573/2014</u>**

**ಪಿ.ಡಬ್ಲೂ:01 ಶ್ರೀ ರಾಮಕೃಷ್ಣಪ್ಪ**

**ಸಾಕ್ಷಿಯನ್ನು ದಿನಾಂಕಃ 04-06-2026 ರಂದು ಕರೆಸಿ ಪುನಃ ಪ್ರಮಾಣವಚನ ಭೋದಿಸಲಾಯಿತು.**

**<u>ಪಾಟೀಸವಾಲು ಃ ಪ್ರತಿವಾದಿಯ ಪರ ಶ್ರೀ.ಆರ್ ಎಸ್ ಎನ್ ವಕೀಲರಿಂದ</u>**

1. ನನ್ನ ಪ್ರಕಾರ ನಾನು ದಾವಾ ಆಸ್ತಿಯನ್ನು ದಿಃ14.12.2011 ರಂದು 1 ನೇ ಪ್ರತಿವಾದಿ ಇಂದ 1 ಲಕ್ಷ ರೂಪಾಯಿಗೆ ಖರೀದಿ ಮಾಡಿರುತ್ತೇನೆ. ಆ ಸಮಯದಲ್ಲಿ 1 ನೇ ಪ್ರತಿವಾದಿಯು ಅವರಿಗೆ ಮನೆಯಲ್ಲಿ ಆರ್ಥಿಕ ತೊಂದರೆ ಇರುವ ಬಗ್ಗೆ ಹೇಳಿರುತ್ತಾರೆ. ಆ ಸಮಯದಲ್ಲಿ 1 ನೇ ಪ್ರತಿವಾದಿಯು ದಾವಾ ಆಸ್ತಿಯನ್ನು ಮಾರಾಟ ಮಾಡುವ ಬಗ್ಗೆ ನನಗೆ ಹೇಳಿರುತ್ತಾರೆ. ನನಗೆ ದಾವಾ ಆಸ್ತಿಯ ವಿವರಗಳ ಬಗ್ಗೆ ಗೊತ್ತಿದ್ದು ಅದು ಸರ್ವೆ ನಂ.57/ಪಿ ಆಗಿದ್ದು ಅದರಲ್ಲಿ ವಿಸ್ತೀರ್ಣ 1 ಎಕರೆ 9 ಗುಂಟೆ ಆಗಿದ್ದು ಅದು ಗೋಪೇನಹಳ್ಳಿ ಗ್ರಾಮದಲ್ಲಿ ಇರುತ್ತದೆ. ಸದರಿ ಸರ್ವೆ ನಂ.57/ಪಿ ಯ ಚೆಕ್ಕು ಬಂದಿ ನನಗೆ ಗೊತ್ತಿದ್ದು ಪೂರ್ವಕ್ಕೆ ನೀರಿನ ಕಾಲುವೆ, ಪಶ್ಚಿಮಕ್ಕೆ ಪಾಪಣ್ಣನವರ ಜಮೀನು, ಉತ್ತರಕ್ಕೆ ಮುನಿಯಪ್ಪ-ಮುನಿಸ್ವಾಮಿರವರ ಜಮೀನು, ದಕ್ಷಿಣಕ್ಕೆ ಚೋಟಾಸಾಬ್ ರವರ ಆಸ್ತಿ ಇರುತ್ತದೆ.

2. ಸದರಿ ಮೇಲೆ ಹೇಳಿದ ಸರ್ವೆ ನಂ.57/ಪಿ ಯನ್ನು ಬಿಟ್ಟು 1 ನೇ ಪ್ರತಿವಾದಿಗೆ ಬೇರೆ ಆಸ್ತಿಗಳು ಇರುತ್ತವೆ. ನಾನು ಖರೀದಿ ಮಾಡಿದ್ದೇನೆ ಎಂದು ಹೇಳಲಾದ ಜಮೀನಿನ ಪಕ್ಕದಲ್ಲಿ ನೀರಿನ ಕಾಲುವೆ ಇದೆ ಎಂದರೆ ಸರಿ. ಸದರಿ ನೀರಿನ ಕಾಲುವೆ ಆದ ನಂತರ 1 ನೇ ಪ್ರತಿವಾದಿಗೆ ಸೇರಿದ ಇತರ ಆಸ್ತಿಗಳು ಇವೆ ಎಂದರೆ ಸರಿ. ನನ್ನ ಪ್ರಕಾರ ಸರ್ವೆ ನಂ.57 ರ ಒಟ್ಟು ವಿಸ್ತೀರ್ಣವು 1 ಎಕರೆ 9 ಗುಂಟೆ ಆಗಿರುತ್ತದೆ. ಸದರಿ ಆಸ್ತಿಯಲ್ಲಿ ಯಾವುದೇ ಖರಾಬು ಇರುವುದಿಲ್ಲ. ಸದರಿ ಸರ್ವೆ ನಂ.57 ರ ಒಟ್ಟು ವಿಸ್ತೀರ್ಣ 6 ಎಕರೆ 8 ಗುಂಟೆ ಎಂದರೆ ಸರಿಯಲ್ಲ. ಸದರಿ ಸರ್ವೆ ನಂ.57 ರ ಪಹಣಿಯಲ್ಲಿ ಒಟ್ಟು ವಿಸ್ತೀರ್ಣದ 4 ಎಕರೆ 39 ಗುಂಟೆ ಖರಾಬು ಇದೆ ಎಂದು ಪಹಣಿಯಲ್ಲಿ ನಮೂದಿದೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು 1 ನೇ ಪ್ರತಿವಾದಿ ಹೆಸರಿನಲ್ಲಿ 1 ಎಕರೆ 9 ಗುಂಟೆಗೆ ಪ್ರತ್ಯೇಕ ಪಹಣಿ ಇದೆ ಎನ್ನುತ್ತಾರೆ. ಸದರಿ ಪಹಣಿಯನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ.

3. ಮೇಲೆ ಹೇಳಿದ ಸರ್ವೆ ನಂ.57 ರ 4 ಎಕರೆ 39 ಗುಂಟೆ ಖರಾಬು ಜಮೀನನ್ನು ನಾನು ಖರೀದಿ ಮಾಡಿಲ್ಲ ಎಂದರೆ ಸರಿ. ಸದರಿ 4 ಎಕರೆ 39 ಗುಂಟೆ ಆಸ್ತಿಯಲ್ಲಿ ನನಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿ. ಸದಿರಿ 4 ಎಕರೆ 39 ಗುಂಟೆಯಲ್ಲಿ 1 ಎಕರೆ 9 ಗುಂಟೆಯನ್ನು ಈ ದಾವೆಯ 3 ನೇ ಪ್ರತಿವಾದಿರವರು 1 ಪ್ರತಿವಾದಿ ಇಂದ ಖರೀದಿ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿಯು ಮುಂದುವರೆದು ನನಗೆ ತೊಂದರೆ ಕೊಡುವ ಸಲುವಾಗಿ 1 ನೇ ಪ್ರತಿವಾದಿ ಹಾಗೂ 3 ನೇ ಪ್ರತಿವಾದಿ ಆ ರೀತಿ ಮಾಡಿರುತ್ತಾರೆ ಎನ್ನುತ್ತಾರೆ. ಸದರಿ 3 ನೇ ಪ್ರತಿವಾದಿಯು 1 ನೇ ಪ್ರತಿವಾದಿ ಇಂದ ಕಾಲುವೆಯ ಪಕ್ಕದಲ್ಲಿರುವ ಜಮೀನನ್ನು ಖರೀದಿ ಮಾಡಿರುತ್ತಾರೆ ಎಂದರೆ

ನನಗೆ ಗೊತ್ತಿಲ್ಲ. ನನ್ನ ಪ್ರಕಾರ ನಾನು ಖರೀದಿ ಮಾಡಿದ್ದೇನೆ ಎಂದು ಹೇಳಲಾದ ಜಮೀನಿನ ಅಕ್ಕ ಪಕ್ಕ 1 ನೇ ಪ್ರತಿವಾದಿಗೆ ಸೇರಿದ ಇತರ ಆಸ್ತಿಗಳು ಇವೆ ಎಂದರೆ ನನಗೆ ಗೊತ್ತಿಲ್ಲ.

4. ನನ್ನ ವಾದ ಪತ್ರದ ಷೆಡ್ಯೂಲ್ ನಲ್ಲಿ ದಾವಾ ಆಸ್ತಿಯ ಉತ್ತರಕ್ಕೆ ಮುನಿಯಪ್ಪ ಎಂದು ನಮೂದು ಮಾಡಿದ್ದು ಅದು 1 ನೇ ಪ್ರತಿವಾದಿ ಅಲ್ಲ ಬೇರೆ ಮುನಿಯಪ್ಪರವರು ಆಗಿರುತ್ತಾರೆ. ಸದರಿ ದಾವಾ ಆಸ್ತಿಯ ಉತ್ತರಕ್ಕಿರುವ ಮುನಿಯಪ್ಪ ರವರು 1 ನೇ ಪ್ರತಿವಾದಿ ಆಗಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಪ್ರಕಾರ ನಾನು 1 ನೇ ಪ್ರತಿವಾದಿಗೆ ದಿಃ14.12.2011 ರಂದು 30,000 ಹಣವನ್ನು ಹಾಗೂ ದಿಃ12.12.2012 ರಂದು 1 ನೇ ಪ್ರತಿವಾದಿಗೆ 60,000 ಹಣವನ್ನು ಕೊಟ್ಟಿದ್ದು ಉಳಿದ 10,000 ಇನ್ನು ಕೊಡಲು ಬಾಕಿ ಇರುತ್ತದೆ. ಸದರಿ 60,000 ಹಣದ ಸಂದಾಯಕ್ಕೆ ಸಂಬಂದ ಪಟ್ಟಂತೆ ನಾನು ಕ್ರಯದ ಕರಾರು ಪ್ರಮಾಣ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ.

**ಮುಂದುವರೆದ ಪಾಟೀಸವಾಲಗೆ ಪ್ರತಿವಾದಿ ಪರ ವಕೀಲರು ಸಮಯ ಕೋರಿದ್ದು ಮುಂದೂಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತಗೊಳಿಸಲಾಗಿದೆ).**

**ಓದಿ ಹೇಳಿ ಕೇಳಿ ಸರಿ ಇದೆ**

**Sd/-**

**C/c 2 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ, ಕೆಜಿಎಫ್.**